Teachingninja.in

Latest Govt Job updates

Private Job updates

Free Mock tests available

Visit - teachingninja.in

# KHC
# Civil Judge

## Previous Year Paper
### Mains (Law Paper-IIII)
### 01 Oct, 2021

Teachingninja.in

# HIGH COURT OF KARNATAKA
## ಕರ್ನಾಟಕ ಉಚ್ಚ ನ್ಯಾಯಾಲಯ

## CIVIL JUDGE MAIN WRITTEN EXAMINATION 2021
## ಸಿವಿಲ್ ನ್ಯಾಯಾಧೀಶರ ಮುಖ್ಯ ಲಿಖಿತ ಪರೀಕ್ಷೆ 2021

## LAW PAPER III
## ಕಾನೂನು ಪತ್ರಿಕೆ – III

### Framing of charges and writing of Judgment in Criminal Case
ಅಪರಾಧ ಪ್ರಕರಣಗಳಲ್ಲಿ ಆರೋಪಣೆಗಳನ್ನು ರೂಪಿಸುವುದು ಮತ್ತು ತೀರ್ಪನ್ನು ಬರೆಯುವುದು

Date: 01.10.2021 Max. Marks: 100
ದಿನಾಂಕ: 01.10.2021 ಗರಿಷ್ಠ ಅಂಕಗಳು: 100

Time: 2.30 PM to 5.30 PM
ಸಮಯ: ಮಧ್ಯಾಹ್ನ 2.30 ರಿಂದ 5.30 ಗಂಟೆ

**Instructions:**
**ಸೂಚನೆಗಳು:**

1. Option is given to the candidates to write answers either in English or in Kannada

   ಕನ್ನಡ ಅಥವಾ ಆಂಗ್ಲ ಭಾಷೆಯಲ್ಲಿ ಉತ್ತರಿಸುವುದನ್ನು ಅಭ್ಯರ್ಥಿಗಳ ಆಯ್ಕೆಗೆ ಬಿಡಲಾಗಿದೆ.

2. If there is any discrepancy or difference in the questions in English language and Kannada language, the questions as framed in English language shall prevail.

   ಒಂದು ವೇಳೆ ಆಂಗ್ಲ ಭಾಷೆ ಮತ್ತು ಕನ್ನಡ ಭಾಷೆಗಳಲ್ಲಿರುವ ಪ್ರಶ್ನೆಗಳ ನಡುವೆ ಯಾವುದೇ ಲೋಪ ಅಥವಾ ವ್ಯತ್ಯಾಸ ಕಂಡುಬಂದಲ್ಲಿ, ಆಂಗ್ಲ ಭಾಷೆಯಲ್ಲಿ ರೂಪಿಸಿರುವ ಪ್ರಶ್ನೆಯು ಪ್ರಭಾವವುಳ್ಳದ್ದಾಗುತ್ತದೆ.

3. Write your register number only on the cover page in the space provided in your answer book and nowhere else. You shall not write your name or make any kind of marks disclosing your identity on any part of your answer book or additional answer book. Contravention of the above instruction will entail disqualification.

   ನಿಮ್ಮ ರಿಜಿಸ್ಟರ್ ನಂಬರನ್ನು ಉತ್ತರ ಪತ್ರಿಕೆಯ ಕವರ್ ಪುಟದಲ್ಲಿ ಒದಗಿಸಿದ ಜಾಗದಲ್ಲಿ ಮಾತ್ರ ಬರೆಯಬೇಕು, ಬೇರೆ ಎಲ್ಲಿಯೂ ಬರೆಯಬಾರದು. ನಿಮ್ಮ ಗುರುತನ್ನು ಬಹಿರಂಗಪಡಿಸುವಂತೆ ಉತ್ತರ ಪತ್ರಿಕೆಯಲ್ಲಾಗಲಿ ಅಥವಾ ಹೆಚ್ಚುವರಿ ಉತ್ತರ ಪತ್ರಿಕೆಯಲ್ಲಾಗಲಿ ನಿಮ್ಮ ಹೆಸರನ್ನು ಬರೆಯಬಾರದು ಅಥವಾ ಯಾವುದೇ ಗುರುತನ್ನು ಮಾಡಬಾರದು. ಈ ಮೇಲಿನ ಸೂಚನೆ ಉಲ್ಲಂಘಿಸಿದರೆ ನೀವು ಅನರ್ಹತೆಗೆ ಗುರಿಯಾಗುತ್ತೀರಿ.

Teachingninja.in

**1. Frame proper plea in the following case.**

**Marks: 10**

**C C No.78/2011**

**Complainant:** State by Hubli Vidyanagara Police Station

And

**Accused:** Suresh Gowda

It is alleged in the charge sheet that, on 20.07.2010 at about 05.30 p.m. on the small bridge at Unkal Tank Bund, on Hubli-Dharwad Road, accused, being the driver of a KSRTC bus bearing Registration Number KA25-F-7187, by driving the same in a rash and negligent manner by endangering human life, dashed to a bike, which was coming from the opposite direction, due to which, one Raghava, who was riding the motor bike, sustained fatal injuries and died at the spot and CW2, who is the pillion rider in the bike, sustained grievous injuries. With these allegations, Inspector of Police of Hubli Vidyanagara Police Station filed the charge sheet against the accused.

**ಈ ಕೆಳಗಿನ ಪ್ರಕರಣದಲ್ಲಿ ಸರಿಯಾದ ಆರೋಪಣೆಯನ್ನು ರೂಪಿಸಿ:** **ಅಂಕಗಳು: 10**

**ಸಿ.ಸಿ.ಸಂಖ್ಯೆ 78/2011**

ಫಿರ್ಯಾದಿ: ರಾಜ್ಯ ಸರ್ಕಾರ ಪರವಾಗಿ
ಹುಬ್ಬಳ್ಳಿ ವಿದ್ಯಾನಗರ ಪೋಲೀಸ್ ಠಾಣೆ

**ವಿರುದ್ಧ**

ಆರೋಪಿ: ಸುರೇಶ್ ಗೌಡ

ದೋಷಾರೋಪಣ ಪಟ್ಟಿಯಲ್ಲಿ ಆರೋಪಿಸಿದ ಪ್ರಕಾರ ದಿನಾಂಕ 20.07.2010 ರಂದು ಸಂಜೆ ಸುಮಾರು 5.30 ಗಂಟೆಗೆ ಹುಬ್ಬಳ್ಳಿ – ಧಾರವಾಡ ರಸ್ತೆಯ ಉಣಕಲ್ ಕೆರೆ ದಂಡೆಯ ಮೇಲಿನ ಕಿರು

Teachingninja.in

ಸೇತುವೆಯಲ್ಲಿ ಆರೋಪಿಯು ಕೆಎ25-ಎಫ್-7187 ನೊಂದಣಿ ಸಂಖ್ಯೆಯ ಕೆ.ಎಸ್.ಆರ್.ಟಿ.ಸಿ ಬಸ್ಸಿನ ಚಾಲಕನಾಗಿ ಆ ಬಸ್ಸನ್ನು ಅತೀ ವೇಗ ಮತ್ತು ಅಜಾಗರೂಕತೆಯಿಂದ ಮಾನವ ಜೀವಕ್ಕೆ ಅಪಾಯಕಾರಿ ಆಗುವಂತೆ ಚಲಾಯಿಸಿ ಮುಂಭಾಗದಿಂದ ಬರುತ್ತಿದ್ದ ಒಂದು ಮೋಟಾರು ಬೈಕಿಗೆ ಡಿಕ್ಕಿ ಹೊಡೆದ ಪರಿಣಾಮ ಮೋಟಾರು ಬೈಕನ್ನು ಚಲಾಯಿಸುತ್ತಿದ್ದ ರಾಘವ ಎನ್ನುವವರಿಗೆ ಮಾರಣಾಂತಿಕ ಗಾಯಗಳಾಗಿ ಆತ ಸ್ಥಳದಲ್ಲಿಯೇ ಮೃತಪಟ್ಟಿದ್ದು ಬೈಕಿನ ಹಿಂಭಾಗದಲ್ಲಿ ಕುಳಿತಿದ್ದ ಚಾಸಾ.2 ರವರಿಗೆ ಗಂಭೀರ ಸ್ವರೂಪದ ಗಾಯಗಳಾಗಿದ್ದವು. ಈ ಎಲ್ಲಾ ಆರೋಪಗಳೊಂದಿಗೆ ಹುಬ್ಬಳ್ಳಿ ವಿದ್ಯಾನಗರ ಪೋಲೀಸ್ ಠಾಣೆಯ ಆರಕ್ಷಕ ನಿರೀಕ್ಷಕರು ಆರೋಪಿಯ ವಿರುದ್ಧ ದೋಷಾರೋಪಣಾ ಪಟ್ಟಿಯನ್ನು ಸಲ್ಲಿಸಿದ್ದರು.

**2. Frame appropriate charge for the Trial of accused on the basis of the following charge sheet material.**

**Marks: 20**

**C C No.688/2018**

**Complainant:** State by Honnavara Police.

And

**Accused:** 1) Ranganatha.
2) Somanatha.

It was alleged in the charge sheet that on 12.04.2018 at about 3.00 p.m. accused No.1 and 2, with common intention, trespassed into the house of CW1 Sundara, situated at Gandhinagara, Honnavara, within the jurisdiction of Honnavara Police Station and picked up the quarrel with CW1 and abused him in filthy language and accused No.1 assaulted CW.1 with club, causing simple injuries on his left shoulder and when the wife of CW1, Kamala (CW2) intervened to pacify the quarrel, the accused No.2 dragged her by holding her saree and tore her blouse with an intention to outrage her modesty and accused No.1 and 2 posed

Teachingninja.in

threat to kill CW1 and 2 and while going back, accused pelted stones to the house of CW1, broken the tiles and glasses of the window, causing loss to the tune of Rs.7,000/- to CW.1. With these allegations, Inspector of Police of Honnavara Police Station filed the charge sheet against the accused No.1 and 2.

**ಈ ಕೆಳಗೆ ತೋರಿಸಿದ ದೋಷಾರೋಪಣಾ ಪತ್ರದಲ್ಲಿ ಪ್ರಸ್ತಾಪಿಸಿದ ಮಾಹಿತಿಗಳ ಆಧಾರದ ಮೇಲೆ ಆರೋಪಿತರ ವಿರುದ್ಧ ದೋಷಾರೋಪಣೆಯನ್ನು ರೂಪಿಸಿ:**

**ಅಂಕಗಳು: 20**

**ಸಿ.ಸಿ.ಸಂಖ್ಯೆ 688/2018**

ಫಿರ್ಯಾದಿ: ರಾಜ್ಯ ಸರ್ಕಾರ ಪರವಾಗಿ ಹೊನ್ನಾವರ ಪೋಲೀಸ್ ಠಾಣೆ

**ವಿರುದ್ಧ**

ಆರೋಪಿ:
1. ರಂಗನಾಥ
2. ಸೋಮನಾಥ

ದೋಷಾರೋಪಣಾ ಪಟ್ಟಿಯಲ್ಲಿ ಆರೋಪಿಸಿದ ಪ್ರಕಾರ ದಿನಾಂಕ 12.04.2008 ರಂದು ಮಧ್ಯಾಹ್ನ ಸುಮಾರು 3.00 ಗಂಟೆಗೆ ಆರೋಪಿ 1 ಮತ್ತು 2 ಸಮಾನ ಉದ್ದೇಶದಿಂದ ಹೊನ್ನಾವರ ಪೋಲೀಸ್ ಠಾಣೆಯ ವ್ಯಾಪ್ತಿಯಲ್ಲಿರುವ ಹೊನ್ನಾವರ ಗಾಂಧಿ ನಗರದಲ್ಲಿ ಇರುವ ಚಾಸಾ.1 ಸುಂದರ ಇವರ ಮನೆಗೆ ಅತಿಕ್ರಮ ಪ್ರವೇಶ ಮಾಡಿ ಚಾಸಾ.1 ರವರೊಂದಿಗೆ ಜಗಳ ತೆಗೆದು ಆತನಿಗೆ ಅವಾಚ್ಯ ಶಬ್ದಗಳಿಂದ ಬೈದು 1ನೇ ಆರೋಪಿಯು ಚಾಸಾ.1 ರವರಿಗೆ ದೊಣ್ಣೆಯಿಂದ ಹೊಡೆದು ಆತನ ಎಡ ಭುಜದ ಮೇಲೆ ಸಾಮಾನ್ಯ ಸ್ವರೂಪದ ಗಾಯವನ್ನು ಉಂಟು ಮಾಡಿದ್ದು ಚಾಸಾ.1 ರವರ ಹೆಂಡತಿ ಕಮಲ(ಚಾಸಾ.2) ಜಗಳವನ್ನು ಬಿಡಿಸಲು ಮಧ್ಯ ಪ್ರವೇಶಿಸಿದಾಗ 2ನೇ ಆರೋಪಿಯು ಆಕೆಯ ಮಾನಭಂಗ ಮಾಡುವ ಉದ್ದೇಶದಿಂದ ಸೀರೆ ಹಿಡಿದು ಎಳೆದಾಡಿ ಆಕೆಯ ರವಿಕೆಯನ್ನು ಹರಿದು ಹಾಕಿ 1 ಮತ್ತು 2ನೇ ಆರೋಪಿತರು ಚಾಸಾ.1 ಮತ್ತು 2 ರವರಿಗೆ ಕೊಲೆ ಬೆದರಿಕೆ ಹಾಕಿ ವಾಪಸ್ಸು ಹೋಗುವಾಗ ಆರೋಪಿತರು ಚಾಸಾ.1 ರವರ ಮನೆಗೆ ಕಲ್ಲು ತೂರಿ ಹೆಂಚುಗಳನ್ನು ಮತ್ತು ಕಿಟಕಿ ಗಾಜುಗಳನ್ನು ಹೊಡೆದು ಹಾಕಿ ಚಾಸಾ.1 ರವರಿಗೆ

Teachingninja.in

ರೂ.7,000/–ದಷ್ಟು ನಷ್ಟ ಉಂಟು ಮಾಡಿದ್ದರು. ಈ ಎಲ್ಲಾ ಆರೋಪದೊಂದಿಗೆ ಹೊನ್ನಾವರ ಪೋಲೀಸ್ ಠಾಣೆಯ ಆರಕ್ಷಕ ನೀರಿಕ್ಷಕರು 1 ಮತ್ತು 2ನೇ ಆರೋಪಿತರ ವಿರುದ್ಧ ದೋಷಾರೋಪಣಾ ಪಟ್ಟಿಯನ್ನು ಸಲ್ಲಿಸಿದ್ದರು.

**3. Write a considered judgment in the following case by giving valid and cogent reasons assuming rival contentions and documents of the prosecution from the facts and evidence narrated below.**

**JUDICIAL MAGISTRATE OF FIRST CLASS, DEVANAHALLI**

**CC No.1078/2012**

**Complainant:** State by Devanahalli Police Station

**Vs**

**Accused:** Dharmaraja,
Aged 28 years,
S/o Chanappa,
R/of Bagalakunte,
Doddaballapura Taluk,
Bengaluru Rural District.

(Accused is in judicial custody)

**Facts of the Case:**

On 08.01.2012, at about 6.45 p.m., when CW1 and 2 were coming back to their house in their motor bike, after visiting Ghati Subramanya Temple, in front of KMF farm at Baguru village, within the jurisdiction of Devanahalli Police Station, accused came in a motorbike bearing No.KA51-J-5898 and stopped the motorbike, in which CW1 and 2 were going and asked them to give whatever they have, by pointing out a knife to them and they were frightened and CW1 gave his gold ring, where as CW2 gave her mangalya chain to

Teachingninja.in

the accused and accused thrown the knife at the spot and gone in his motor bike.

On the basis of the complaint lodged by CW1 Panduranga, Devanahalli Police have registered the FIR in Crime No.28/2012 and the Investigating Officer proceeded to the spot, drawn the spot mahazar, seized knife from the spot and recorded the statement of witnesses and arrested the accused and recorded his voluntary statement, on the basis of which, he seized gold ring and mangalya chain from the shop of CW.7 and after investigation, CW10 filed the charge sheet against the accused, by alleging that the accused has committed the offence punishable under Section 384 of Indian Penal Code.

The Court took the cognizance of the case and accused produced before the Court was remanded to the judicial custody. Copy of the charge sheet and its enclosures were furnished to the accused. The charges were framed against the accused and he pleaded not guilty and claimed to be tried.

In order to prove the guilt of the accused, prosecution let in following evidence before the Court.

**CW1 - Panduranga**

CW1, who was examined as PW1, deposed that on 08.01.2012 at about 6.30 p.m., when he and his wife CW2 were returning to their house in a motorbike, after visiting Ghati Subramanya temple, near KMF farm in Baguru village, a person came on a motorbike and attacked them. PW1 further deposed that said person pointed out a knife towards them and asked them to give the ornaments, which

Teachingninja.in

were with them and they frightened and handed over a gold ring and mangalya chain to that person. PW1 further deposed that on the next day, he went to Devanahalli Police Station and lodged a complaint as per Ex.P1 and police came to the spot and drawn a mahazar as per Ex.P2 and seized the knife from the spot. PW1 further deposed that about 3 months after the incident, police have informed him that they have arrested the accused and when he gone to the police station, police shown the accused to him and also their ornaments and he identified the same. PW1 has identified knife as MO1, gold ring as MO2 and mangalya chain as MO3. PW1 has also identified accused before the Court, as person who attacked them and forcibly taken gold ornaments from them.

During the course of his cross-examination by the counsel for the accused, PW1 deposed that the alleged incident occurred at about 6.45 p.m. and there was dark at the spot, because of which he could not identify the face of that person. PW1 admitted that because of police showing the accused in the police station, he identified the accused as the person who taken the gold ornaments from them. PW1 deposed that there was no hurdle for him to lodge the complaint on the same evening, when the alleged incident taken place. PW1 denied the suggestion that he has lodged a false complaint and also denied the suggestion that police have not drawn any spot mahazar in his presence.

**CW2 - Manjula**

Wife of the complainant Smt.Manjula was examined as PW2 and she deposed that on 08.01.2012 at about 7.00 p.m. when she and her husband were returning to their house in a bike after

Teachingninja.in

visiting Ghati Subramanya temple, near KMF farm at Baguru village, a person came in a motorbike and stopped their motor bike and pointed out a knife to them and asked them to gave the ornaments, which were with them. PW2 further deposed that being afraid, they gave gold ring and mangalya chain to that person and after taking those ornaments, he gone away by throwing the knife. PW2 further deposed that they returned to their house and on next day, her husband lodged complaint before the Devanahalli Police Station. PW2 further deposed that about 4 months after the incident, police have shown the accused and their ornaments in the police station and told that the accused has snatched the gold ornaments from them. PW2 has identified the accused and also MO1 to 3.

During of her cross-examination, PW2 admitted that the alleged incident took place at about 7.00 p.m. and there was dark at the incident spot and face of culprit could not be seen. PW2 further deposed that before the incident, she has not seen accused and only after police showing the accused, she has identified him. PW2 denied the suggestion that alleged incident has not taken place and MO2 and 3 does not belong to them.

**CW3 - Manjunatha**

CW3, who was examined as PW3, deposed that on 09.01.2012 Devanahalli police took him near KMF farm Baguru village, on Ghati Subramanya Temple Road and drawn a mahazar as per Ex.P2 and seized a knife from the spot. PW3 identified the MO1 knife.

PW3 deposed during the course of his cross-examination that he was not aware as to why the said mahazar was drawn. PW3

Teachingninja.in

denied the suggestion that no such mahazar was drawn and he has put the signature for Ex.P2 mahazar in the Devanahalli Police Station.

**CW5- Rangaswamy**

CW5, who was examined as PW4, deposed that no mahazar was drawn in his presence in the shop of CW7 by seizing the gold ornaments. PW4 identified his signatures on Ex.P3 seizure mahazar.

The learned Assistant Public Prosecutor has treated PW4 as a hostile witness and cross-examined him. Even during the course of cross-examination, PW4 denied the suggestion that accused took them to the shop of CW7 and shown the gold ornaments sold by him and MO.2 and 3 were seized by drawing the mahazar as per Ex.P3.

**CW-7 - Shambulingegowda**

CW7, who was examined as PW5, deposed that during January 2012 accused came to his shop and pledged a gold ring and a mangalya chain and he paid a sum of Rs.50,000/- to him. PW5 further deposed that about 3 months after this incident Devanahalli Police came to his shop along with the accused and told him that the gold ornaments pledged by the accused were snatched by the accused and asked him to handover the gold ornaments pledged by the accused and same were seized by drawing a mahazar as per Ex.P3. PW5 identified the accused and MO2 and MO3.

During the course of his cross-examination, PW5 deposed that he is not running any money lending or jewellery business. PW5 denied the suggestion that accused has not pledged MO2 and 3 with

Teachingninja.in

him and he has not paid any amount to him. PW5 denied the suggestion that at the instance of Devanahalli Police, he deposing falsely.

**CW10 - Ramesh**

CW-10, who was examined as PW6, deposed that during the year 2011 and 2012, he was working as an Inspector of Police in Devahanahalli Police Station and on 09.01.2012 CW1 appeared before the police station and lodged a complaint as per Ex.P1, on the basis of which he has registered the FIR in Crime No.28/2012 as per Ex.P4. PW6 further deposed that on the same day at about 3.00 p.m. he visited the spot and drawn the spot mahazar as per Ex.P2 in the presence of CW3 and 4 and seized MO1 knife from the spot. PW6 further deposed that he recorded the statement of CW2 and on 14.04.2012, CW9 produced the accused before him with a report as per Ex.P5 and he arrested the accused and recorded his voluntary statement as per Ex.P6. PW6 further deposed that as per his voluntary statement accused took them to the shop of CW7 at Hebbala and told that he has pledged the gold ornaments with CW7. PW6 further deposed that he has recovered the MO2 and 3 gold ornaments by drawing as seizure mahazar as per Ex.P3 in the presence of CW5 and 6. PW6 further deposed that he produced the accused before the court, who was remanded to the judicial custody and thereafter recorded the statement of CW5 to 9 and further statement of CW1 and 2. PW6 further deposed that after completion of investigation, he filed the charge sheet against the accused.

Teachingninja.in

During the course of his cross-examination PW6 denied the suggestion that accused has not given any voluntary statement before him. PW6 denied the suggestion that MO1 to 3 were given to him by CW1 to register a false case against the accused. PW6 denied the suggestion that he has not gone to the spot and not drawn any spot mahazar. PW6 denied the suggestion that accused has not taken them to the shop of CW7 and MO2 and 3 were not recovered from the shop of CW7 and no mahazar was drawn. PW6 denied the suggestion that at the instigation of CW1 he has registered a false case against the accused and deposed falsely before the Court.

**STATEMENT OF THE ACCUSED UNDER SECTION 313 OF CODE OF CRIMINAL PROCEDURE**

All the incriminating evidence appearing against the accused was read over to him and accused denied them as false and stated that it is a false case registered against him to settle the personal vengeance by the complainant.

**ARGUMENTS FOR THE PROSECUTION**

The learned Assistant Public Prosecutor has argued that the prosecution case is based upon both the direct evidence and also the circumstantial evidence. It was further argued by the learned Assistant Public Prosecutor that both PW1 and 2 have deposed about the incident and identified the accused and MO1 to 3 and thereby the prosecution has proved the allegation against the accused by direct evidence. It was further argued by the learned

Teachingninja.in

Assistant Public Prosecutor that recovery of stolen ornaments was also proved with the evidence of PW5. Therefore there is circumstantial evidence also to prove the guilt of the accused. It was further argued that though all these witnesses were cross examined by the learned counsel for the accused, no material aspects were brought out from their cross examination to disbelieve their oral testimony. It was further argued by the learned Assistant Public Prosecutor that the evidence let in by the prosecution is free from any infirmities and would establish the case of the prosecution beyond all reasonable doubt. Therefore, the learned Assistant Public Prosecutor prayed to convict the accused.

**ARGUMENTS FOR THE ACCUSED**

The learned counsel for the accused argued that evidence let in by the prosecution is full of material contradictions, variations and discrepancies. It was further argued by the counsel for the accused that both PW1 and 2 have not identified the accused and independent witness for the seizure mahazar has turned hostile. It was further argued by the counsel for accused that there is no direct evidence to prove the guilt of the accused and evidence let in by the prosecution miserably failed to connect the circumstances to bring home the guilt of the accused. On all these grounds, learned counsel for the accused prayed to acquit the accused by extending the benefit of doubt to him.

Teachingninja.in

**ಈ ಕೆಳಗಿನ ಸಂಗತಿ ಮತ್ತು ಸಾಕ್ಷ್ಯಗಳಿಂದ ಉಭಯ ಪಕ್ಷಗಾರರ ವಾದ ಮತ್ತು ಅಭಿಯೋಜನೆಯ ದಾಖಲಾತಿಗಳನ್ನು ಭಾವಿಸಿಕೊಂಡು ಸಮಂಜಸ ಮತ್ತು ತರ್ಕಬದ್ಧ ಸಮರ್ಥನಾಂಶಗಳನ್ನು ನೀಡಿ ತೀರ್ಪನ್ನು ಬರೆಯಿರಿ.**

**ಅಂಕಗಳು: 70**

**ಪ್ರಥಮ ದರ್ಜೆ ನ್ಯಾಯಿಕ ದಂಡಾಧಿಕಾರಿಗಳು, ದೇವನಹಳ್ಳಿ**

**ಸಿ.ಸಿ.ನಂ.1078/2012**

**ಫಿರ್ಯಾದುದಾರ:** ಕರ್ನಾಟಕ ಸರ್ಕಾರ
ಪ್ರತಿನಿಧಿಸುವವರು: ದೇವನಹಳ್ಳಿ ಪೋಲೀಸ್ ಠಾಣೆ

**ವಿರುದ್ಧ**

**ಆರೋಪಿ:** ಧರ್ಮರಾಜ, ವಯಸ್ಸು 28 ವರ್ಷ
ತಂದೆ ಚನ್ನಪ್ಪ
ವಾಸ: ಬಾಗಲಕುಂಟೆ,
ದೊಡ್ಡಬಳ್ಳಾಪುರ ತಾಲೂಕು,
ಬೆಂಗಳೂರು ಗ್ರಾಮಾಂತರ ಜಿಲ್ಲೆ.

(ಆರೋಪಿಯು ನ್ಯಾಯಾಂಗ ಬಂಧನದಲ್ಲಿರುತ್ತಾನೆ)

**ಪ್ರಕರಣದ ಸಂಗತಿಗಳು:**

ದಿನಾಂಕ 08.01.2012ರಂದು ಸಂಜೆ ಸುಮಾರು 6.45 ಗಂಟೆಗೆ ಚಾಸಾ.1 ಮತ್ತು 2 ರವರು ಘಾಟಿ ಸುಬ್ರಮಣ್ಯ ದೇವಸ್ಥಾನಕ್ಕೆ ಹೋಗಿ ತಮ್ಮ ಮನೆಗೆ ಮೋಟಾರು ಬೈಕಿನಲ್ಲಿ ವಾಪಸ್ಸು ಬರುತ್ತಿದ್ದಾಗ ದೇವನಹಳ್ಳಿ ಪೋಲೀಸ್ ಠಾಣೆಯ ವ್ಯಾಪ್ತಿಯಲ್ಲಿರುವ ಬಾಗೂರು ಗ್ರಾಮದ ಕೆ.ಎಂ.ಎಫ್ ಫಾರ್ಮ ಮುಂಭಾಗದಲ್ಲಿ ಆರೋಪಿಯು ಕೆಎ51–ಜೆ–5898 ನೊಂದಣಿ ಸಂಖ್ಯೆಯ ಮೋಟಾರು ಬೈಕಿನಲ್ಲಿ ಬಂದು ಚಾಸಾ.1 ಮತ್ತು 2 ರವರು ಹೋಗುತಿದ್ದ ಮೋಟಾರು ಬೈಕನ್ನು ಅಡ್ಡಗಟ್ಟಿ ಅವರಿಗೆ ಚಾಕುವನ್ನು ತೋರಿಸಿ ಅವರ ಬಳಿ ಏನೇನು ಇದೆಯೊ ಅದನ್ನು ಕೊಡಲು ಹೇಳಿದ್ದು ಅವರು ಹೆದರಿ ಚಾಸಾ.1 ತನ್ನ ಚಿನ್ನದ ಉಂಗುರವನ್ನು ಮತ್ತು ಚಾಸಾ.2 ತನ್ನ ಮಾಂಗಲ್ಯ ಸರವನ್ನು ಆರೋಪಿಗೆ ಕೊಟ್ಟಿದ್ದು ಆರೋಪಿಯು ಚಾಕುವನ್ನು ಸ್ಥಳದಲ್ಲಿ ಬಿಸಾಡಿ ತನ್ನ ಮೋಟಾರು ಬೈಕಿನಲ್ಲಿ ಸ್ಥಳದಿಂದ ಹೋಗಿದ್ದನು.

ಚಾಸಾ.1 ಪಾಂಡುರಂಗ ಕೊಟ್ಟಂತಹ ದೂರಿನ ಆಧಾರದಲ್ಲಿ ದೇವನಹಳ್ಳಿ ಪೋಲೀಸರು ಪ್ರಕರಣ ಸಂಖ್ಯೆ 28/2012ರಲ್ಲಿ ಒಂದು ಪ್ರಥಮ ವರ್ತಮಾನ ವರದಿಯನ್ನು ದಾಖಲು ಮಾಡಿಕೊಂಡು ತನಿಖಾಧಿಕಾರಿಯವರು ಸ್ಥಳಕ್ಕೆ ಭೇಟಿ ಕೊಟ್ಟು ಸ್ಥಳ ಮಹಜರನ್ನು ಮಾಡಿ ಸ್ಥಳದಿಂದ ಚಾಕುವನ್ನು ಅಮಾನತ್ತು ಪಡಿಸಿಕೊಂಡು ಸಾಕ್ಷಿದಾರರ ಹೇಳಿಕೆಗಳನ್ನು ದಾಖಲು ಮಾಡಿಕೊಂಡು ಆರೋಪಿಯನ್ನು

Teachingninja.in

ಬಂಧಿಸಿ ಆತ ಕೊಟ್ಟಂತಹ ಸ್ವ-ಇಚ್ಛಾ ಹೇಳಿಕೆಯ ಆಧಾರದ ಮೇಲೆ ಚಾಸಾ.7ರವರ ಅಂಗಡಿಯಿಂದ ಚಿನ್ನದ ಉಂಗುರ ಮತ್ತು ಮಾಂಗಲ್ಯ ಸರವನ್ನು ಅಮಾನತ್ತು ಪಡಿಸಿಕೊಂಡು ಚಾಸಾ.10 ರವರು ತನಿಖೆಯನ್ನು ಪೂರೈಸಿ ಆರೋಪಿಯ ವಿರುದ್ಧ ಆತ ಭಾರತೀಯ ದಂಡ ಸಂಹಿತೆಯ ಕಲಂ 384ರ ಅಡಿಯಲ್ಲಿ ಅಪರಾಧವೆಸಗಿದ್ದಾನೆ ಎಂದು ಆರೋಪಿಸಿ ದೋಷಾರೋಪಣಾ ಪಟ್ಟಿಯನ್ನು ಸಲ್ಲಿಸಿದ್ದರು.

ನ್ಯಾಯಾಲಯವು ಆರೋಪದ ಸಂಜ್ಞೆಯನ್ನು ತೆಗೆದುಕೊಂಡು ನ್ಯಾಯಾಲಯದ ಮುಂದೆ ಹಾಜರು ಪಡಿಸಿದ ಆರೋಪಿಯನ್ನು ನ್ಯಾಯಾಂಗ ಬಂಧನಕ್ಕೆ ಕಳುಹಿಸಲಾಗಿತ್ತು. ದೋಷಾರೋಪಣಾ ಪಟ್ಟಿ ಮತ್ತು ಅದರೊಂದಿಗೆ ಲಗ್ತಿಕರಿಸಿದ ದಾಖಲೆಗಳ ಪ್ರತಿಗಳನ್ನು ಆರೋಪಿಗೆ ನೀಡಲಾಯಿತು. ಆರೋಪಿಯ ವಿರುದ್ಧ ದೋಷಾರೋಪಣೆಯನ್ನು ರಚಿಸಿದಾಗ ಆರೋಪಿಯು ತಾನು ತಪ್ಪು ಮಾಡಿಲ್ಲ ಮತ್ತು ವಿಚಾರಣೆ ಆಗಬೇಕು ಎಂದು ಕೇಳಿಕೊಂಡಿದ್ದನು.

ಆರೋಪಿಯ ವಿರುದ್ಧ ಆರೋಪವನ್ನು ಸಾಬೀತು ಪಡಿಸುವ ನಿಟ್ಟಿನಲ್ಲಿ ಅಭಿಯೋಜನೆಯು ನ್ಯಾಯಾಲಯದ ಮುಂದೆ ಈ ಕೆಳಗಿನ ಸಾಕ್ಷ್ಯವನ್ನು ನೀಡಿರುತ್ತದೆ.

**<u>ಚಾ.ಸಾ.1 – ಪಾಂಡುರಂಗ</u>**

ಚಾಸಾ.1 ಅಸಾ.1 ಎಂದು ಸಾಕ್ಷಿ ನುಡಿಯುತ್ತಾ ದಿನಾಂಕ 08.01.2012ರಂದು ಸಂಜೆ 6.30 ಗಂಟೆಗೆ ತಾನು ಮತ್ತು ತನ್ನ ಹೆಂಡತಿ (ಚಾಸಾ.2) ಒಂದು ಮೋಟಾರು ಬೈಕಿನಲ್ಲಿ ಘಾಟಿ ಸುಬ್ರಮಣ್ಯ ದೇವಸ್ಥಾನಕ್ಕೆ ಹೋಗಿ ತಮ್ಮ ಮನೆಗೆ ವಾಪಸ್ಸು ಬರುತ್ತಿದ್ದಾಗ ಬಾಗೂರು ಗ್ರಾಮದ ಕೆ.ಎಂ.ಎಫ್. ಫಾರ್ಮ್‌ದ ಬಳಿ ಓರ್ವ ವ್ಯಕ್ತಿಯು ಒಂದು ಮೋಟಾರು ಬೈಕಿನಲ್ಲಿ ಬಂದು ತಮ್ಮ ಮೇಲೆ ದಾಳಿ ಮಾಡಿದ್ದ ಎಂದು ಸಾಕ್ಷಿ ನುಡಿಯುತ್ತಾರೆ. ಅಸಾ.1 ಮುಂದುವರಿದು ಆ ವ್ಯಕ್ತಿಯು ತಮಗೆ ಒಂದು ಚಾಕುವನ್ನು ತೋರಿಸಿ ನಮ್ಮ ಬಳಿ ಇರುವ ಎಲ್ಲಾ ಆಭರಣಗಳನ್ನು ಕೊಡಲು ಹೇಳಿದ್ದು ತಾವು ಹೆದರಿ ಒಂದು ಚಿನ್ನದ ಉಂಗುರ ಮತ್ತು ಮಾಂಗಲ್ಯ ಸರವನ್ನು ಆತನಿಗೆ ಕೊಟ್ಟಿರುವುದಾಗಿ ಸಾಕ್ಷಿ ನುಡಿಯುತ್ತಾರೆ. ಅಸಾ.1 ಮುಂದುವರಿದು ಮರುದಿನ ತಾನು ದೇವನಹಳ್ಳಿ ಪೋಲೀಸ್ ಠಾಣೆಗೆ ಹೋಗಿ ನಿಶಾನೆ ಪಿ.1 ರಂತೆ ಒಂದು ಫಿರ್ಯಾದಿಯನ್ನು ಸಲ್ಲಿಸಿದ್ದು ಬಳಿಕ ಪೋಲೀಸರು ಸ್ಥಳಕ್ಕೆ ಬಂದು ನಿಶಾನೆ ಪಿ.2ರಂತೆ ಒಂದು ಮಹಜರನ್ನು ಮಾಡಿ ಸ್ಥಳದಿಂದ ಚಾಕುವನ್ನು ಅಮಾನತ್ತು ಪಡಿಸಿಕೊಂಡಿದ್ದರು ಎಂದು ಸಾಕ್ಷಿ ನುಡಿಯುತ್ತಾರೆ. ಅಸಾ.1 ಮುಂದುವರಿದು ಈ ಘಟನೆಯಾದ ಸುಮಾರು ಮೂರು ತಿಂಗಳ ಬಳಿಕ ಪೋಲೀಸರು ಆರೋಪಿಯನ್ನು ಬಂಧಿಸಿರುವುದಾಗಿ ತಿಳಿಸಿದ್ದು ತಾನು ಪೋಲೀಸ್ ಠಾಣೆಗೆ ಹೋದಾಗ ಪೋಲೀಸರು ಆರೋಪಿಯನ್ನು ಮತ್ತು ನಮ್ಮ ಆಭರಣಗಳನ್ನು ತೋರಿಸಿದ್ದು ತಾನು ಅದನ್ನು ಗುರುತಿಸಿದ್ದೆ ಎಂದು ಸಾಕ್ಷಿ ನುಡಿಯುತ್ತಾರೆ.

Teachingninja.in

ಅಸಾ.1 ಚಾಕುವನ್ನು ಮುದ್ದೆ ಮಾಲು 1 ಎಂದು ಬಂಗಾರದ ಉಂಗುರುವನ್ನು ಮುದ್ದೆ ಮಾಲು 2 ಎಂದು ಮತ್ತು ಮಾಂಗಲ್ಯ ಸರವನ್ನು ಮುದ್ದೆ ಮಾಲು 3 ಎಂದು ಗುರುತಿಸಿದ್ದಾರೆ. ಅಸಾ.1 ತಮ್ಮ ಮೇಲೆ ದಾಳಿ ಮಾಡಿ ಬಂಗಾರದ ಆಭರಣಗಳನ್ನು ಬಲಾತ್ಕಾರವಾಗಿ ತೆಗೆದುಕೊಂಡು ಹೋದ ವ್ಯಕ್ತಿ ಈಗ ನ್ಯಾಯಾಲಯದ ಮುಂದೆ ಇರುವ ಆರೋಪಿ ಎಂದು ಸಹ ಗುರುತಿಸುತ್ತಾರೆ.

ಆರೋಪಿ ಪರ ವಕೀಲರು ಮಾಡಿರುವ ಪಾಟೀ ಸವಾಲಿನಲ್ಲಿ ಅಸಾ.1 ರವರು ಆರೋಪಿಸಿದ ಘಟನೆ ಆಗುವಾಗ ಸಂಜೆ ಸುಮಾರು 6.45 ಗಂಟೆ ಆಗಿತ್ತು ಮತ್ತು ಆಗ ಸ್ಥಳದಲ್ಲಿ ತುಂಬ ಕತ್ತಲೆ ಇದ್ದುದರಿಂದ ತನಗೆ ಆ ವ್ಯಕ್ತಿಯ ಮುಖವನ್ನು ಗುರುತಿಸಲು ಆಗಿರಲಿಲ್ಲ ಎಂದು ಸಾಕ್ಷಿ ನುಡಿಯುತ್ತಾರೆ. ಅಸಾ.1 ಪೋಲೀಸರು ಆರೋಪಿಯನ್ನು ಪೋಲೀಸ್ ಠಾಣೆಯಲ್ಲಿ ತೋರಿಸಿದ್ದರಿಂದ ನಮ್ಮಿಂದ ಚಿನ್ನದ ಆಭರಣಗಳನ್ನು ತೆಗೆದುಕೊಂಡು ಹೋದ ವ್ಯಕ್ತಿ ಈ ಆರೋಪಿ ಎಂದು ನಾನು ಗುರುತಿಸಿದ್ದೆ ಎಂದು ಒಪ್ಪಿಕೊಳ್ಳುತ್ತಾರೆ. ಅಸಾ.1 ಆರೋಪಿಸಿದ ಘಟನೆ ಆದ ದಿನವೇ ಸಂಜೆ ತನಗೆ ಫಿರ್ಯಾದಿ ಕೊಡಲು ಯಾವುದೇ ಅಡಚಣೆಗಳು ಇರಲಿಲ್ಲ ಎಂದು ಸಾಕ್ಷಿ ನುಡಿಯುತ್ತಾರೆ. ಅಸಾ.1 ತಾನು ಒಂದು ಸುಳ್ಳು ಫಿರ್ಯಾದಿಯನ್ನು ಕೊಟ್ಟಿದ್ದೆ ಮತ್ತು ಪೋಲೀಸರು ತನ್ನ ಸಮಕ್ಷಮ ಯಾವುದೇ ಸ್ಥಳ ಮಹಜರನ್ನು ಮಾಡಿಲ್ಲ ಎನ್ನುವ ಸೂಚನೆಯನ್ನು ನಿರಾಕರಿಸಿದ್ದಾರೆ.

**ಚಾ.ಸಾ.2 – ಮಂಜುಳ**

ಫಿರ್ಯಾದಿಯ ಹೆಂಡತಿ ಶ್ರೀಮತಿ ಮಂಜುಳ ಅಸಾ.2 ಎಂದು ಸಾಕ್ಷಿ ನುಡಿಯುತ್ತಾ ದಿನಾಂಕ 08.01.2012ರಂದು ಸಂಜೆ 7.00 ಗಂಟೆಗೆ ತಾನು ಮತ್ತು ಆಕೆಯ ಗಂಡ ಘಾಟಿ ಸುಬ್ರಮಣ್ಯ ದೇವಸ್ಥಾನಕ್ಕೆ ಹೋಗಿ ವಾಪಸ್ಸು ತಮ್ಮ ಮನೆಗೆ ಒಂದು ಬೈಕಿನಲ್ಲಿ ಬರುತ್ತಿದ್ದಾಗ ಬಾಗೂರು ಗ್ರಾಮದ ಕೆ.ಎಂ.ಎಫ್ ಫಾರ್ಮದ ಬಳಿ ಓರ್ವ ವ್ಯಕ್ತಿಯು ಒಂದು ಮೋಟಾರು ಬೈಕಿನಲ್ಲಿ ಬಂದು ತಮ್ಮ ಮೋಟಾರು ಬೈಕನ್ನು ನಿಲ್ಲಿಸಿ ಚಾಕುವನ್ನು ನಮಗೆ ತೋರಿಸಿ ನಮ್ಮ ಬಳಿ ಇರುವ ಎಲ್ಲಾ ಆಭರಣಗಳನ್ನು ಕೊಡಿ ಎಂದು ಕೇಳಿದ್ದ ಎಂದು ಸಾಕ್ಷಿ ನುಡಿಯುತ್ತಾರೆ. ಅಸಾ.2 ಮುಂದುವರಿದು ತಾವು ಹೆದರಿ ಚಿನ್ನದ ಉಂಗುರ ಮತ್ತು ಮಾಂಗಲ್ಯ ಸರವನ್ನು ಆ ವ್ಯಕ್ತಿಗೆ ನೀಡಿದ್ದು ಅದನ್ನು ಪಡೆದು ಆತನು ಚಾಕುವನ್ನು ಬಿಸಾಡಿ ಸ್ಥಳದಿಂದ ಹೋಗಿದ್ದ ಎಂದು ಸಾಕ್ಷಿ ನುಡಿಯುತ್ತಾರೆ. ಅಸಾ.2 ಮುಂದುವರಿದು ಅವರು ಮನೆಗೆ ವಾಪಸ್ಸು ಬಂದು ಮರುದಿನ ಆಕೆಯ ಗಂಡ ದೇವನಹಳ್ಳಿ ಪೋಲೀಸ್ ಠಾಣೆಗೆ ಹೋಗಿ ಒಂದು ಫಿರ್ಯಾದಿಯನ್ನು ದಾಖಲು ಮಾಡಿದ್ದರು ಎಂದು ಸಾಕ್ಷಿ ನುಡಿಯುತ್ತಾರೆ. ಅಸಾ.2 ಮುಂದುವರಿದು ಈ ಘಟನೆಯಾದ ಸುಮಾರು 4 ತಿಂಗಳ ಬಳಿಕ ಪೋಲೀಸರು ಪೋಲೀಸ್ ಠಾಣೆಯಲ್ಲಿ ಆರೋಪಿಯನ್ನು ಮತ್ತು ಆಭರಣಗಳನ್ನು

Teachingninja.in

ತೋರಿಸಿ ಆರೋಪಿಯೆ ನಮ್ಮಿಂದ ಬಂಗಾರದ ಆಭರಣಗಳನ್ನು ಕಿತ್ತುಕೊಂಡು ಹೋಗಿದ್ದವನು ಎಂದು ಹೇಳಿದರು ಎಂದು ಸಾಕ್ಷಿ ನುಡಿಯುತ್ತಾರೆ. ಅಸಾ.2 ಆರೋಪಿಯನ್ನು ಮತ್ತು ಮುದ್ದೆ ಮಾಲು 1 ರಿಂದ 3ನ್ನು ಗುರುತಿಸಿದ್ದಾರೆ.

ತಮ್ಮ ಪಾಟೀ ಸವಾಲಿನಲ್ಲಿ ಅಸಾ.2 ಆರೋಪಿಸಿದ ಘಟನೆಯು ಸಂಜೆ ಸುಮಾರು 7 ಗಂಟೆಗೆ ಆಗಿದ್ದು ಆಗ ಘಟನಾ ಸ್ಥಳದಲ್ಲಿ ಕತ್ತಲೆ ಇತ್ತು ಮತ್ತು ಆರೋಪಿಯ ಮುಖವನ್ನು ನೋಡಲು ಆಗುತ್ತಿರಲಿಲ್ಲ ಎಂದು ಒಪ್ಪಿಕೊಳ್ಳುತ್ತಾರೆ. ಅಸಾ.2 ಮುಂದುವರಿದು ಈ ಘಟನೆಯ ಮೊದಲು ತಾನು ಆರೋಪಿಯನ್ನು ನೋಡಿರಲಿಲ್ಲ ಮತ್ತು ಕೇವಲ ಪೋಲೀಸರು ಆರೋಪಿಯನ್ನು ತೋರಿಸಿದ ಬಳಿಕ ತಾನು ಆರೋಪಿಯನ್ನು ಗುರುತಿಸಿದ್ದೆ ಎಂದು ಸಾಕ್ಷಿ ನುಡಿಯುತ್ತಾರೆ. ಅಸಾ.2 ಆರೋಪಿಸಿದ ಘಟನೆ ನಡೆದಿಲ್ಲ ಮತ್ತು ಮುದ್ದೆ ಮಾಲು 2 ಮತ್ತು 3 ನಮಗೆ ಸೇರಿದಲ್ಲ ಎನ್ನುವ ಸೂಚನೆಯನ್ನು ನಿರಾಕರಿಸಿದ್ದಾರೆ.

**ಚಾ.ಸಾ.3 – ಮಂಜುನಾಥ**

ಚಾಸಾ.3 ಅಸಾ.3 ಎಂದು ಸಾಕ್ಷಿ ನುಡಿಯುತ್ತಾ ದಿನಾಂಕ 09.01.2012ರಂದು ದೇವನಹಳ್ಳಿ ಪೋಲೀಸರು ತನ್ನನ್ನು ಬಾಗೂರು ಗ್ರಾಮದ ಕೆ.ಎಂ.ಎಫ್. ಫಾರ್ಮ ಬಳಿ ಇರುವ ಘಾಟಿ ಸುಬ್ರಮಣ್ಯ ದೇವಸ್ಥಾನ ರಸ್ತೆಗೆ ಕರೆದುಕೊಂಡು ಹೋಗಿ ನಿಶಾನೆ ಪಿ.2 ರಂತೆ ಒಂದು ಮಹಜರನ್ನು ಮಾಡಿ ಸ್ಥಳದಿಂದ ಒಂದು ಚಾಕುವನ್ನು ಅಮಾನತ್ತು ಪಡಿಸಿಕೊಂಡಿದ್ದರು ಎಂದು ಸಾಕ್ಷಿ ನುಡಿಯುತ್ತಾರೆ. ಅಸಾ.3 ಮುದ್ದೆ ಮಾಲು 1 ಚಾಕುವನ್ನು ಗುರುತಿಸುತ್ತಾರೆ.

ಅಸಾ.3 ತನ್ನ ಪಾಟೀ ಸವಾಲಿನಲ್ಲಿ ಆ ಮಹಜರನ್ನು ಯಾಕೆ ಮಾಡಲಾಗಿತ್ತು ಎನ್ನುವುದು ತನಗೆ ಗೊತ್ತಿಲ್ಲ ಎಂದು ಸಾಕ್ಷಿ ನುಡಿಯುತ್ತಾರೆ. ಅಸಾ.3 ಅಂತಹ ಯಾವುದೇ ಮಹಜರನ್ನು ಮಾಡಿಲ್ಲ ಮತ್ತು ನಿಶಾನೆ ಪಿ.2 ಮಹಜರಿಗೆ ತಾನು ದೇವನಹಳ್ಳಿ ಪೋಲೀಸ್ ಠಾಣೆಯಲ್ಲಿ ಸಹಿ ಮಾಡಿದ್ದೆ ಎನ್ನುವ ಸೂಚನೆಯನ್ನು ನಿರಾಕರಿಸಿದ್ದಾರೆ.

**ಚಾ.ಸಾ.5 – ರಂಗಸ್ವಾಮಿ**

ಚಾಸಾ.5 ಅಸಾ.4 ಎಂದು ಸಾಕ್ಷಿ ನುಡಿಯುತ್ತಾ ತನ್ನ ಸಮಕ್ಷಮ ಚಾಸಾ.7ರವರ ಅಂಗಡಿಯಲ್ಲಿ ಚಿನ್ನದ ಆಭರಣಗಳನ್ನು ಅಮಾನತ್ತು ಪಡಿಸಿಕೊಂಡು ಯಾವುದೇ ಮಹಜರನ್ನು ಮಾಡಿಲ್ಲ ಎಂದು ಸಾಕ್ಷಿ ನುಡಿಯುತ್ತಾರೆ. ಅಸಾ.4 ನಿಶಾನೆ ಪಿ.3 ಅಮಾನತ್ತು ಮಹಜರಿನಲ್ಲಿರುವ ತನ್ನ ಸಹಿಯನ್ನು ಗುರುತಿಸಿದ್ದಾರೆ.

Teachingninja.in

ಮಾನ್ಯ ಸಹಾಯಕ ಸರ್ಕಾರಿ ಅಭಿಯೋಜಕರು ಅಸಾ.4 ಇವರನ್ನು ಪ್ರತಿಕೂಲ ಸಾಕ್ಷಿಯೆಂದು ಪರಿಗಣಿಸಿ ಪಾಟೀ ಸವಾಲು ಮಾಡಿದ್ದರು. ತಮ್ಮ ಪಾಟೀ ಸವಾಲಿನಲ್ಲಿ ಕೂಡ ಅಸಾ.4 ಆರೋಪಿಯು ಅವರನ್ನು ಚಾಸಾ.7ರವರ ಅಂಗಡಿಗೆ ಕರೆದುಕೊಂಡು ಹೋಗಿ ತಾನು ಆತನಿಗೆ ಮಾರಾಟ ಮಾಡಿದ ಚಿನ್ನದ ಆಭರಣಗಳನ್ನು ತೋರಿಸಿದ್ದು ಅವುಗಳನ್ನು ನಿಶಾನೆ ಪಿ.3 ಮಹಜರು ಮೂಲಕ ಮುದ್ದೆ ಮಾಲು 2 ಮತ್ತು 3ನ್ನು ಅಮಾನತ್ತು ಪಡಿಸಿಕೊಳ್ಳಲಾಗಿತ್ತು ಎನ್ನುವ ಸೂಚನೆಯನ್ನು ನಿರಾಕರಿಸಿದ್ದಾರೆ.

**ಚಾ.ಸಾ.7 – ಶಂಭುಲಿಂಗೇಗೌಡ**

ಚಾಸಾ.7 ಅಸಾ.5 ಎಂದು ಸಾಕ್ಷಿ ನುಡಿಯುತ್ತಾ 2012ನೇ ಸಾಲಿನ ಜನವರಿ ತಿಂಗಳಿನಲ್ಲಿ ಆರೋಪಿ ತನ್ನ ಅಂಗಡಿಗೆ ಬಂದು ಒಂದು ಚಿನ್ನದ ಉಂಗುರ ಮತ್ತು ಒಂದು ಮಾಂಗಲ್ಯ ಸರವನ್ನು ಒತ್ತೆ ಇಟ್ಟಿದ್ದು ತಾನು ಆತನಿಗೆ ರೂ.50,000/–ವನ್ನು ಕೊಟ್ಟಿದ್ದೆ ಎಂದು ಸಾಕ್ಷಿ ನುಡಿಯುತ್ತಾರೆ. ಅಸಾ.5 ಮುಂದುವರಿದು ಈ ಘಟನೆಯಾದ ಸುಮಾರು 3 ತಿಂಗಳ ಬಳಿಕ ದೇವನಹಳ್ಳಿ ಪೋಲೀಸರು ಆರೋಪಿಯೊಂದಿಗೆ ತಮ್ಮ ಅಂಗಡಿಗೆ ಬಂದು ಆರೋಪಿಯು ಒತ್ತೆ ಇಟ್ಟಂತಹ ಚಿನ್ನದ ಆಭರಣಗಳು ಆರೋಪಿಯು ಕಸಿದುಕೊಂಡ ಆಭರಣಗಳಾಗಿದ್ದು ಅವುಗಳನ್ನು ಕೊಡಲು ಕೇಳಿದ್ದು ಅವುಗಳನ್ನು ನಿಶಾನೆ ಪಿ.3 ಮಹಜರು ಮೂಲಕ ಅಮಾನತ್ತು ಪಡಿಸಿಕೊಳ್ಳಲಾಯಿತು ಎಂದು ಸಾಕ್ಷಿ ನುಡಿಯುತ್ತಾರೆ. ಅಸಾ.5 ಮುದ್ದೆ ಮಾಲು 2 ಮತ್ತು 3ನ್ನು ಗುರುತಿಸಿದ್ದಾರೆ.

ಅಸಾ.5 ತನ್ನ ಪಾಟೀ ಸವಾಲಿನಲ್ಲಿ ತಾನು ಲೇವಾದೇವಿ ಅಥವಾ ಆಭರಣಗಳ ವ್ಯಾಪಾರವನ್ನು ನಡೆಸಿಕೊಂಡು ಬರುತ್ತಿಲ್ಲ ಎಂದು ಸಾಕ್ಷಿ ನುಡಿಯುತ್ತಾರೆ. ಅಸಾ.5 ಆರೋಪಿಯು ಮುದ್ದೆ ಮಾಲು 2 ಮತ್ತು 3ನ್ನು ತನ್ನ ಬಳಿ ಒತ್ತೆ ಇಟ್ಟಿಲ್ಲ ಮತ್ತು ತಾನು ಆರೋಪಿಗೆ ಯಾವುದೇ ಹಣವನ್ನು ಕೊಟ್ಟಿಲ್ಲ ಎನ್ನುವ ಸೂಚನೆಯನ್ನು ನಿರಾಕರಿಸಿದ್ದಾರೆ. ಅಸಾ.5 ದೇವನಹಳ್ಳಿ ಪೋಲೀಸರು ಹೇಳಿಕೊಟ್ಟ ಪ್ರಕಾರ ತಾನು ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎನ್ನುವ ಸೂಚನೆಯನ್ನು ನಿರಾಕರಿಸಿದ್ದಾರೆ.

**ಚಾ.ಸಾ.10 – ರಮೇಶ**

ಚಾಸಾ.10 ಅಸಾ.6 ಎಂದು ಸಾಕ್ಷಿ ನುಡಿಯುತ್ತಾ 2011 ಮತ್ತು 2012ನೇ ಸಾಲಿನಲ್ಲಿ ತಾನು ದೇವನಹಳ್ಳಿ ಪೋಲೀಸ್ ಠಾಣೆಯಲ್ಲಿ ಆರಕ್ಷಕ ನಿರೀಕ್ಷಕನಾಗಿ ಕೆಲಸ ಮಾಡುತ್ತಿದ್ದೆ ಮತ್ತು ದಿನಾಂಕ 09.01.2012ರಂದು ಚಾಸಾ.1 ಪೋಲೀಸ್ ಠಾಣೆಗೆ ಹಾಜರಾಗಿ ಸಲ್ಲಿಸಿದ ನಿಶಾನೆ ಪಿ1 ಫಿರ್ಯಾದಿಯ ಆಧಾರದಲ್ಲಿ ತಾನು ನಿಶಾನೆ ಪಿ.4 ರಂತೆ ಪ್ರಕರಣ ಸಂಖ್ಯೆ 28/2012ರಲ್ಲಿ ಪ್ರಥಮ ವರ್ತಮಾನ ವರದಿಯನ್ನು ದಾಖಲು ಮಾಡಿದ್ದೆ ಎಂದು ಸಾಕ್ಷಿ ನುಡಿಯುತ್ತಾರೆ. ಅಸಾ.6 ಮುಂದುವರಿದು ಅದೇ ದಿನ

Teachingninja.in

ಮಧ್ಯಾಹ್ನ 3.00 ಗಂಟೆ ಸುಮಾರಿಗೆ ತಾನು ಸ್ಥಳಕ್ಕೆ ಭೇಟಿ ಕೊಟ್ಟು ಚಾಸಾ.3 ಮತ್ತು 4 ಇವರ ಸಮಕ್ಷಮ ನಿಶಾನೆ ಪಿ.2ರಂತೆ ಸ್ಥಳ ಮಹಜರನ್ನು ಮಾಡಿ ಮುದ್ದೆ ಮಾಲು 1 ಚಾಕುವನ್ನು ಸ್ಥಳದಿಂದ ಅಮಾನತ್ತು ಪಡಿಸಿಕೊಂಡಿದ್ದೆ ಎಂದು ಸಾಕ್ಷಿ ನುಡಿಯುತ್ತಾರೆ. ಅಸಾ.6 ಮುಂದುವರಿದು ತಾನು ಅಸಾ.2 ರವರ ಹೇಳಿಕೆಯನ್ನು ದಾಖಲು ಮಾಡಿಕೊಂಡು ದಿನಾಂಕ 14.04.2012ರಂದು ಚಾಸಾ.9 ರವರು ಆರೋಪಿಯನ್ನು ನಿಶಾನೆ ಪಿ.5 ವರದಿಯೊಂದಿಗೆ ನನ್ನ ಮುಂದೆ ಹಾಜರು ಪಡಿಸಿದ್ದು ತಾನು ಆರೋಪಿಯನ್ನು ಬಂಧಿಸಿ ಆತ ಕೊಟ್ಟ ಸ್ವ-ಇಚ್ಛಾ ಹೇಳಿಕೆಯನ್ನು ನಿಶಾನೆ ಪಿ.6ರಂತೆ ದಾಖಲು ಮಾಡಿದ್ದೆ ಎಂದು ಸಾಕ್ಷಿ ನುಡಿಯುತ್ತಾರೆ. ಅಸಾ.6 ಮುಂದುವರಿದು ತಾನು ಕೊಟ್ಟ ಸ್ವ-ಇಚ್ಛಾ ಹೇಳಿಕೆ ಪ್ರಕಾರ ಆರೋಪಿಯು ತಮ್ಮನ್ನು ಹೆಬ್ಬಾಳದಲ್ಲಿರುವ ಚಾಸಾ.7ರವರ ಅಂಗಡಿಗೆ ಕರೆದುಕೊಂಡು ಹೋಗಿ ತಾನು ಬಂಗಾರದ ಆಭರಣಗಳನ್ನು ಚಾಸಾ.7ರವರಲ್ಲಿ ಒತ್ತೆ ಇಟ್ಟಿರುವುದಾಗಿ ಹೇಳಿದ್ದರು ಎಂದು ಸಾಕ್ಷಿ ನುಡಿಯುತ್ತಾರೆ. ಅಸಾ.6 ಮುಂದುವರಿದು ತಾನು ಮುದ್ದೆ ಮಾಲು 2 ಮತ್ತು 3 ಚಿನ್ನದ ಆಭರಣಗಳನ್ನು ಚಾಸಾ.5 ಮತ್ತು 6 ಇವರ ಸಮಕ್ಷಮ ನಿಶಾನೆ ಪಿ.3 ಅಮಾನತ್ತು ಮಹಜರು ಮೂಲಕ ವಶಕ್ಕೆ ಪಡೆದುಕೊಂಡಿರುವುದಾಗಿ ಸಾಕ್ಷಿ ನುಡಿಯುತ್ತಾರೆ. ಅಸಾ.6 ಮುಂದುವರಿದು ತಾನು ಆರೋಪಿಯನ್ನು ನ್ಯಾಯಾಲಯದ ಮುಂದೆ ಹಾಜರು ಪಡಿಸಿದಾಗ ಆತನನ್ನು ನ್ಯಾಯಾಂಗ ಬಂಧನಕ್ಕೆ ಒಳಪಡಿಸಲಾಯಿತು ಮತ್ತು ಬಳಿಕ ತಾನು ಚಾಸಾ.5 ರಿಂದ 9 ಇವರ ಹೇಳಿಕೆಗಳನ್ನು ಮತ್ತು ಚಾಸಾ.1 ಮತ್ತು 2 ಇವರ ಮರು ಹೇಳಿಕೆಗಳನ್ನು ದಾಖಲು ಮಾಡಿರುವುದಾಗಿ ಸಾಕ್ಷಿ ನುಡಿಯುತ್ತಾರೆ. ಅಸಾ.6 ಮುಂದುವರಿದು ಬಳಿಕ ತನಿಖೆಯನ್ನು ಪೂರೈಸಿ ತಾನು ಆರೋಪಿಯ ವಿರುದ್ಧ ದೋಷಾರೋಪಣಾ ಪಟ್ಟಿಯನ್ನು ಸಲ್ಲಿಸಿರುವುದಾಗಿ ಸಾಕ್ಷಿ ನುಡಿಯುತ್ತಾರೆ.

ಅಸಾ.6 ತನ್ನ ಪಾಟೀ ಸವಾಲಿನಲ್ಲಿ ಆರೋಪಿಯು ನನ್ನ ಮುಂದೆ ಯಾವುದೇ ಸ್ವ-ಇಚ್ಛಾ ಹೇಳಿಕೆಯನ್ನು ಕೊಟ್ಟಿಲ್ಲ ಎನ್ನುವ ಸೂಚನೆಯನ್ನು ನಿರಾಕರಿಸಿದ್ದಾರೆ. ಅಸಾ.6 ಮುದ್ದೆ ಮಾಲು 1 ರಿಂದ 3ನ್ನು ಚಾಸಾ.1 ರವರು ಆರೋಪಿಯ ವಿರುದ್ದ ಒಂದು ಸುಳ್ಳು ಕೇಸು ದಾಖಲು ಮಾಡುವ ಸಲುವಾಗಿ ಕೊಟ್ಟಿದ್ದರು ಎನ್ನುವ ಸೂಚನೆಯನ್ನು ನಿರಾಕರಿಸಿದ್ದಾರೆ. ಅಸಾ.6 ತಾನು ಸ್ಥಳಕ್ಕೆ ಹೋಗಿಲ್ಲ ಮತ್ತು ಯಾವುದೇ ಸ್ಥಳ ಮಹಜರನ್ನು ಮಾಡಿಲ್ಲ ಎನ್ನುವ ಸೂಚನೆಯನ್ನು ನಿರಾಕರಿಸಿದ್ದಾರೆ. ಅಸಾ.6 ಆರೋಪಿಯು ತಮ್ಮನ್ನು ಚಾಸಾ.7ರವರ ಅಂಗಡಿಗೆ ಕರೆದುಕೊಂಡು ಹೋಗಿಲ್ಲ ಮತ್ತು ಮುದ್ದೆ ಮಾಲು 2 ಮತ್ತು 3 ಚಾಸಾ.7 ರವರ ಅಂಗಡಿಯಿಂದ ಅಮಾನತ್ತು ಪಡಿಸಿಕೊಂಡಿಲ್ಲ ಮತ್ತು ಯಾವುದೇ ಮಹಜರನ್ನು ಮಾಡಿಲ್ಲ ಎನ್ನುವ ಸೂಚನೆಗಳನ್ನು ನಿರಾಕರಿದ್ದಾರೆ. ಅಸಾ.6 ತಾನು ಚಾಸಾ.1 ರವರ ಪ್ರಚೋದನೆಯಿಂದ

Teachingninja.in

ಆರೋಪಿಯ ವಿರುದ್ದ ಒಂದು ಸುಳ್ಳು ಕೇಸನ್ನು ದಾಖಲು ಮಾಡಿದ್ದೆ ಮತ್ತು ಆರೋಪಿಯ ವಿರುದ್ದ ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎನ್ನುವ ಸೂಚನೆಗಳನ್ನು ನಿರಾಕರಿಸಿದ್ದಾರೆ.

**ದಂಡ ಪ್ರಕ್ರಿಯಾ ಸಂಹಿತೆಯ ಕಲಂ 313ರಡಿಯಲ್ಲಿ ಆರೋಪಿಯ ಹೇಳಿಕೆ**

ಆರೋಪಿಯ ವಿರುದ್ಧ ಇರುವ ಎಲ್ಲಾ ಹೇಳಿಕೆಗಳನ್ನು ಆರೋಪಿಗೆ ಓದಿ ಹೇಳಲಾಯಿತು ಮತ್ತು ಆರೋಪಿಯು ಅವುಗಳನ್ನು ಸುಳ್ಳು ಎಂದು ನಿರಾಕರಿಸಿ ಫಿರ್ಯಾದಿಯು ತನ್ನ ವೈಯ್ಯಕ್ತಿಕ ದ್ವೇಷನ್ನು ತೀರಿಸಲು ತನ್ನ ವಿರುದ್ದ ಇದೊಂದು ಸುಳ್ಳು ಕೇಸು ದಾಖಲು ಮಾಡಿರುತ್ತಾರೆ ಎಂದು ಹೇಳುತ್ತಾರೆ.

**ಅಭಿಯೋಜನೆಯ ಪರ ವಾದ**

ಮಾನ್ಯ ಸಹಾಯಕ ಸರ್ಕಾರಿ ಅಭಿಯೋಜಕರು ಅಭಿಯೋಜನೆಯ ಪ್ರಕರಣವು ನೇರ ಮತ್ತು ಸಾಂಧರ್ಭಿಕ ಸಾಕ್ಷಿಯ ಎರಡರ ಮೇಲೆ ಅವಲಂಬಿತವಾಗಿರುವ ಪ್ರಕರಣ ಎಂದು ವಾದಿಸುತ್ತಾರೆ. ಮಾನ್ಯ ಸಹಾಯಕ ಸರ್ಕಾರಿ ಅಭಿಯೋಜಕರು ಅಸಾ.1 ಮತ್ತು 2 ಇಬ್ಬರೂ ಕೂಡ ಈ ಘಟನೆಯ ಬಗ್ಗೆ ಸಾಕ್ಷಿ ನುಡಿದಿರುತ್ತಾರೆ ಮತ್ತು ಅವರು ಆರೋಪಿಯನ್ನು ಮತ್ತು ಮುದ್ದೆ ಮಾಲು 1 ರಿಂದ 3ನ್ನು ಗುರುತಿಸಿರುತ್ತಾರೆ ಅದರಿಂದ ಅಭಿಯೋಜನೆಯು ಆರೋಪಿಯ ವಿರುದ್ದದ ಆರೋಪವನ್ನು ನೇರ ಸಾಕ್ಷಿಯ ಮೂಲಕ ಸಾಬೀತು ಪಡಿಸಿದೆ ಎಂದು ವಾದಿಸುತ್ತಾರೆ. ಮಾನ್ಯ ಸಹಾಯಕ ಸರ್ಕಾರಿ ಅಭಿಯೋಜಕರು ಮುಂದುವರಿದು ಕಳವು ಮಾಡಿದ ಆಭರಣಗಳ ಅಮಾನತ್ತು ಕೂಡ ಅಸಾ.5 ರವರ ಸಾಕ್ಷ್ಯದಿಂದ ಸಾಬೀತಾಗಿದೆ ಎಂದು ವಾದಿಸುತ್ತಾರೆ. ಆದುದರಿಂದ ಆರೋಪಿಯ. ವಿರುದ್ದದ ಆರೋಪವನ್ನು ಸಾಬೀತು ಪಡಿಸಲು ಸಾಂಧರ್ಭಿಕ ಸಾಕ್ಷ್ಯಗಳು ಕೂಡ ಇವೆ ಎಂದು ವಾದಿಸುತ್ತಾರೆ. ಮುಂದುವರಿದು ಅಭಿಯೋಜನೆಯ ಎಲ್ಲಾ ಸಾಕ್ಷಿಗಳನ್ನು ಆರೋಪಿ ಪರ ಮಾನ್ಯ ವಕೀಲರು ಪಾಟೀ ಸವಾಲು ಮಾಡಿದ್ದರು ಕೂಡ ಅವರ ಮೌಖಿಕ ಸಾಕ್ಷ್ಯವನ್ನು ನಂಬದೆ ಇರಲು ಯಾವುದೇ ಅಂಶವನ್ನು ಪಾಟೀ ಸವಾಲಿನಿಂದ ಹೊರತರಲು ವಿಫಲರಾಗಿದ್ದಾರೆ ಎಂದು ವಾದಿಸುತ್ತಾರೆ. ಮಾನ್ಯ ಸಹಾಯಕ ಸರ್ಕಾರಿ ಅಭಿಯೋಜಕರು ಮುಂದುವರಿದು ಅಭಿಯೋಜನೆಯು ಹಾಜರು ಪಡಿಸಿದ ಸಾಕ್ಷಿಯು ಯಾವುದೇ ದುರ್ಬಲತೆಯಿಂದ ಹೊರತಾಗಿದ್ದು ಅಭಿಯೋಜನೆಯ ಪ್ರಕರಣವನ್ನು ಸಂಶಯಾತೀತವಾಗಿ ಸಾಬೀತು ಪಡಿಸುತ್ತದೆ ಎಂದು ವಾದಿಸುತ್ತಾರೆ. ಆದುದರಿಂದ ಮಾನ್ಯ ಸಹಾಯಕ ಸರ್ಕಾರಿ ಅಭಿಯೋಜಕರು ಆರೋಪಿಯನ್ನು ಶಿಕ್ಷಿಸಲು ಕೋರುತ್ತಾರೆ.

Teachingninja.in

**ಆರೋಪಿಯ ಪರ ವಾದ**

ಆರೋಪಿ ಪರ ಮಾನ್ಯ ವಕೀಲರು ಅಭಿಯೋಜನೆಯು ಹಾಜರು ಪಡಿಸಿದ ಸಾಕ್ಷ್ಯದಲ್ಲಿ ತುಂಬ ವಿರೋದಾಬಾಸಗಳು, ವ್ಯತ್ಯಾಸಗಳು ಮತ್ತು ನ್ಯೂನ್ಯತೆಗಳು ಇವೆ ಎಂದು ವಾದಿಸುತ್ತಾರೆ. ಮುಂದುವರಿದು ಅಸಾ.1 ಮತ್ತು 2 ರವರು ಆರೋಪಿಯನ್ನು ಗುರುತಿಸಿಲ್ಲ ಮತ್ತು ಅಮಾನತ್ತು ಮಹಜರಿನ ಸ್ವತಂತ್ರ್ಯ ಸಾಕ್ಷಿ ಪ್ರತಿಕೂಲ ಸಾಕ್ಷಿಯಾಗಿ ಹೊರಹೊಮ್ಮಿದ್ದಾರೆ ಎಂದು ಆರೋಪಿ ಪರ ವಕೀಲರು ವಾದಿಸುತ್ತಾರೆ. ಆರೋಪಿ ಪರ ವಕೀಲರು ಮುಂದುವರಿದು ಆರೋಪಿಯ ವಿರುದ್ದದ ಆರೋಪವನ್ನು ಸಾಬೀತು ಪಡಿಸಲು ಯಾವುದೇ ನೇರ ಸಾಕ್ಷಿ ಇರುವುದಿಲ್ಲ ಮತ್ತು ಅಭಿಯೋಜನೆಯು ಹಾಜರು ಪಡಿಸಿದ ಸಾಕ್ಷಿಯು ಆರೋಪಿಯ ವಿರುದ್ಧ ಆರೋಪವನ್ನು ಸಾಬೀತು ಪಡಿಸುವ ಸಂದರ್ಭಗಳನ್ನು ಸಂಪರ್ಕಿಸಲು ಸಂಪೂರ್ಣವಾಗಿ ವಿಫಲವಾಗಿದೆ ಎಂದು ವಾದಿಸುತ್ತಾರೆ. ಈ ಎಲ್ಲಾ ಕಾರಣಗಳಿಂದ ಆರೋಪಿ ಪರ ಮಾನ್ಯ ವಕೀಲರು ಆರೋಪಿಗೆ ಸಂಶಯದ ಲಾಭವನ್ನು ನೀಡಿ ಬಿಡುಗಡೆ ಮಾಡಲು ಕೋರಿಕೊಂಡಿದ್ದಾರೆ.

*********

Teachingninja.in